## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 5 (ಚಾಸಾ ಃ 11 )

ಪ್ರಮಾಣೀಕರಿಸಿದ ದಿನಾಂಕಃ **21-06-2018**

| | |
|---|---|
| ಹೆಸರು | ಃ ಡಾ. ಶರತ್‌ಚಂದ್ರ |
| ತಂದೆಯ ಹೆಸರು | ಃ ವೆಂಕಟಸುಬ್ಬಯ್ಯ |
| ವಯಸ್ಸು | ಃ 38 ವರ್ಷ |
| ಕೆಲಸ | ಃ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ |
| ವಾಸ | ಃ ಮುಳಬಾಗಿಲು |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು ಏಪ್ರಿಲ್ 2016 ರಿಂದ ಇಲ್ಲಿಯವರೆಗೆ ಮುಳಬಾಗಿಲು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 03-10-2017 ರಂದು ಸಂಜೆ 6.00 ಗಂಟೆಗೆ ಸಿಪಿಐ ಮುಳಬಾಗಿಲು ರವರು ಮುನಿರಾಜು ಎಂಬ ವ್ಯಕ್ತಿಯನ್ನು ಮುಖ್ಯಪೇದೆ ನಾರಾಯಣಸ್ವಾಮಿ ಮತ್ತು ರಮೇಶ್ ರವರ ಜೊತೆ ಅತ್ಯಾಚಾರ ಮಾಡಿದ್ದಾನೆ ಎಂಬ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಪರೀಕ್ಷೆಗಾಗಿ ಕರೆದುಕೊಂಡು ಬಂದಿದ್ದು, ನಾನು ಆತನನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ. ಆತನ ಮೈ ಮೇಲೆ ಯಾವುದೇ ಹೊರ ಗಾಯಗಳು ಇರಲಿಲ್ಲ, ಆತನಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಲು ಯಾವುದೇ ತೊಂದರೆ ಇಲ್ಲ ಎಂದು ಅಭಿಪ್ರಾಯ ಪಟ್ಟು ಈ ಬಗ್ಗೆ ದೃಡೀಕರಣ ಪತ್ರ ನೀಡಿದ್ದು ಅದನ್ನು ನಿಪಿ 5 ಮತ್ತು ಸಹಿಯನ್ನು ನಿಪಿ5 (ಎ) ಎಂದು ಗುರ್ತಿಸಲಾಯಿತು. ಆತನಿಂದ ಪ್ಯಾಂಟ್, ಶರ್ಟು, ಬನಿಯನ್, ಅಂಡರವಿಯರ್ ನೈಲ್‌ಕ್ಲೀಪಿಂಗ್ಸ್, ಪ್ಯೂಬಿಕ್ ಹೇರ್, ಪ್ಯೂಬಿಕ್ ಹೇರ್ ಕೂಂಬಿಂಗ್ಸ್ ತಲೆಕೂದಲು, ಪೆನಲ್ ಸ್ವ್ಯಾಬ್, ಪೆನಲ್ ವಾಷ್, ರಕ್ತದ ಸ್ಯಾಂಪಲ್ ಇವುಗಳನ್ನು ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರ್‌ನಲ್ಲಿರುವ ಸದರಿ 11 ವಸ್ತುಗಳನ್ನು ಸಾಕ್ಷಿ ಗುರ್ತಿಸಿದ್ದು, ಅವುಗಳನ್ನು ಮು.ಮಾಲು 3 ರಿಂದ 13 ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಸದರಿ ಆರೋಪಿಯನ್ನು ಸಾಕ್ಷಿ ಗುರ್ತಿಸುತ್ತಾರೆ.

**<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-</u>**

ಪಾಟೀ ಸವಾಲು ಇಲ್ಲ

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 6 (ಚಾಸಾ ಃ 8 )

ಪ್ರಮಾಣೀಕರಿಸಿದ ದಿನಾಂಕಃ **21-06-2018**

| | |
|---|---|
| ಹೆಸರು | ಃ ರೆಡ್ಡಪ್ಪ |
| ತಂದೆಯ ಹೆಸರು | ಃ ಸುಬ್ಬರಾಯಪ್ಪ |
| ವಯಸ್ಸು | ಃ 23 ವರ್ಷ |
| ಕೆಲಸ | ಃ ಕೂಲಿ |
| ವಾಸ | ಃ ಯಡಹಳ್ಳಿ |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನೊಂದ ಬಾಲಕಿ, ಚಾಸಾ 2 ವೆಂಕಟರೆಡ್ಡಿ, ಚಾಸಾ 3 ಲಕ್ಷ್ಮೀದೇವಮ್ಮ, ಚಾಸಾ 4 ನಾರಾಯಣಸ್ವಾಮಿ ಗೊತ್ತಿಲ್ಲ. ಆರೋಪಿತರು ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ 2 (ಬಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಮುಳಬಾಗಿಲು ಠಾಣೆಯಲ್ಲಿ ಸುಮಾರು 2 ವರ್ಷಗಳ ಹಿಂದೆ ಮಾಡಿರುತ್ತೇನೆ. ನೊಂದ ಬಾಲಕಿಯ ಮೇಲೆ ಅತ್ಯಾಚಾರ ಆಗಿದ್ದ ಹಿನ್ನಲೆಯಲ್ಲಿ ಸುಮಾರು 15 ಜನ ನಮ್ಮ ಊರಿನಿಂದ ಠಾಣೆಗೆ ಹೋಗಿದ್ದು, ಅವರ ಜೊತೆ ನಾನು ಹೋಗಿದ್ದಾಗ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ. ಪೊಲೀಸರು ಓದಿ ಹೇಳಿಲ್ಲ, ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ಆರೋಪಿತರ ಮನೆಯ ಬಳಿ ಸದರಿ ಸಹಿಯನ್ನು ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿಪಿರವರು ಅನುಮತಿ ಕೋರಿರುತ್ತಾರೆ. ಅನುಮತಿ ಕೊಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ವಿಶೇಷ ಪಿಪಿ ರವರಿಂದ ಃ-**

ದಿಃ 06-10-2017 ರಂದು ಆರೋಪಿ ಮುನಿರಾಜು ರವರ ಮನೆಯ ಬಳಿ ನೊಂದ ಬಾಲಕಿ ಘಟನೆ ನಡೆದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೊಲೀಸರು ಬೆಳಿಗ್ಗೆ 11.00 ರಿಂದ 11.45 ರವರೆಗೆ ಮಹಜರ್‌ನ್ನು ಬರೆದು ಓದಿ ಹೇಳಿದ ನಂತರ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ

ಕೇಸಿನ ಎಲ್ಲಾ ವಿಚಾರ ಗೊತ್ತಿದ್ದೂ ಈಗ ಆರೋಪಿಗಳಿಗೆ ಸಹಾಯ ಮಾಡಲು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಪಾಟೀ ಸವಾಲು ಇಲ್ಲ

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 7 (ಚಾಸಾ ಃ 9 )

ಪ್ರಮಾಣೀಕರಿಸಿದ ದಿನಾಂಕಃ **21-06-2018**

| | | |
|---|---|---|
| ಹೆಸರು | ಃ | ಮಂಜುನಾಥ |
| ತಂದೆಯ ಹೆಸರು | ಃ | ಪಿಳ್ಳಯ್ಯ |
| ವಯಸ್ಸು | ಃ | 29 ವರ್ಷ |
| ಕೆಲಸ | ಃ | ಕೂಲಿ |
| ವಾಸ | ಃ | ಭೀಮಾಪುರ ಗ್ರಾಮ |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನೊಂದ ಬಾಲಕಿ, ಚಾಸಾ 2 ವೆಂಕಟರೆಡ್ಡಿ, ಚಾಸಾ 3 ಲಕ್ಷ್ಮಿದೇವಮ್ಮ, ಚಾಸಾ 4 ನಾರಾಯಣಸ್ವಾಮಿ ಗೊತ್ತಿಲ್ಲ. ಆರೋಪಿತರು ಗೊತ್ತು. ಈಗ ನನಗೆ ತೋರಿಸಿದ ಎರಡು ದಾಖಲೆಗಳಲ್ಲಿ ನನ್ನ ಸಹಿಗಳು ಇದ್ದು, ಅವುಗಳನ್ನು ನಿಪಿ 2 (ಸಿ) ಮತ್ತು ನಿಪಿ 3 (ಬಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಮುಳಬಾಗಿಲು ಠಾಣೆಯಲ್ಲಿ ನೊಂದ ಬಾಲಕಿಯ ಮೇಲೆ ಅತ್ಯಾಚಾರ ಆಗಿದೆ ಎಂಬ ವಿಷಯದಲ್ಲಿ ನ್ಯಾಯಕ್ಕೆ ಕರೆದಿದ್ದಾಗ ಸುಮಾರು 2 ವರ್ಷಗಳ ಹಿಂದೆ ಸದರಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ. ಪೊಲೀಸರು 10-15 ಜನ ಸಹಿ ಮಾಡುತ್ತಿದ್ದಾಗ ನೀವು ಮಾಡಿ ಎಂದು ಹೇಳಿದರು. ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ಆರೋಪಿತರ ಮನೆಯ ಬಳಿ ಸದರಿ ಸಹಿಯನ್ನು ಮಾಡಿಲ್ಲ. ಹನುಮನಹಳ್ಳಿ, ಬೆಟ್ಟಗೇರನಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ ಸದರಿ ಸಹಿಯನ್ನು ಮಾಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿಪಿರವರು ಅನುಮತಿ ಕೋರಿರುತ್ತಾರೆ. ಅನುಮತಿ ಕೊಡಲಾಗಿದೆ)**

**ಪಾಟೀ ಸವಾಲುಃ ಮಾನ್ಯ ವಿಶೇಷ ಪಿಪಿ ರವರಿಂದ ಃ-**

ದಿಃ 06-10-2017 ರಂದು ಆರೋಪಿ ಮುನಿರಾಜು ರವರ ಮನೆಯ ಬಳಿ ನೊಂದ ಬಾಲಕಿ ಘಟನೆ ನಡೆದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೊಲೀಸರು ಬೆಳಿಗ್ಗೆ 11.00 ರಿಂದ 11.45 ರವರೆಗೆ ಮಹಜರ್‌ನ್ನು ಬರೆದು ಓದಿ ಹೇಳಿದ ನಂತರ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ಹನುಮನಹಳ್ಳಿ ಪಂಚಾಯಿತಿ ಬೆಟ್ಟಗೇರನಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ ನೊಂದ ಬಾಲಕಿ ತನಗೆ ವಿಷ ಪ್ರಾಶನ ಮಾಡಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೊಲೀಸರು ಮದ್ಯಾಹ್ನ 12.00 ರಿಂದ 12.45 ರವರೆಗೆ ಮಹಜರ್ ಬರೆದು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಎಲ್ಲಾ ವಿಚಾರ ಗೊತ್ತಿದ್ದೂ ಈಗ ಆರೋಪಿಗಳಿಗೆ ಸಹಾಯ ಮಾಡಲು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಪಾಟೀ ಸವಾಲು ಇಲ್ಲ

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಎಸ್.ಸಿ. ನಂಃ 01/2018**

ಪ್ರಾಸಾ ಃ 8 **(**ಚಾಸಾ ಃ 10 **)**

ಪ್ರಮಾಣೀಕರಿಸಿದ ದಿನಾಂಕಃ **21-06-2018**

ಹೆಸರು ಃ ಎಂ. ಆನಂದ್

ತಂದೆಯ ಹೆಸರು ಃ ಬಿ. ಮುನಿಯಪ್ಪ

ವಯಸ್ಸು ಃ 34 ವರ್ಷ

ಕೆಲಸ ಃ ಟೋಲ್‌ನಲ್ಲಿ ಕೆಲಸ

ವಾಸ ಃ ಬೆಟ್ಟಗೇರಹಳ್ಳಿ

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನೊಂದ ಬಾಲಕಿ, ಚಾಸಾ 2 ವೆಂಕಟರೆಡ್ಡಿ, ಚಾಸಾ 3 ಲಕ್ಷ್ಮಿದೇವಮ್ಮ, ಚಾಸಾ 4 ನಾರಾಯಣಸ್ವಾಮಿ, ಸುನಿತಮ್ಮ, ನಾಗಪ್ಪ ಗೊತ್ತು, ಆರೋಪಿತರು ಗೊತ್ತು, ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ 3 **(**ಸಿ**)** ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಮುಳಬಾಗಿಲು ಠಾಣೆಯಲ್ಲಿ ನೊಂದ ಬಾಲಕಿಯ ಮೇಲೆ ಅತ್ಯಾಚಾರ ಆಗಿದೆ ಎಂಬ ವಿಷಯದಲ್ಲಿ ನ್ಯಾಯಕ್ಕೆ ಕರೆದಿದ್ದಾಗ ಸುಮಾರು 2 ವರ್ಷಗಳ ಹಿಂದೆ ಸದರಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ. ಪೊಲೀಸರು 10-15 ಜನ ಸಹಿ ಮಾಡುತ್ತಿದ್ದಾಗ ನೀವು ಮಾಡಿ ಎಂದು ಹೇಳಿದರು. ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ಹನುಮನಹಳ್ಳಿ, ಬೆಟ್ಟಗೇರನಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ ಸದರಿ ಸಹಿಯನ್ನು ಮಾಡಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿಪಿರವರು ಅನುಮತಿ ಕೋರಿರುತ್ತಾರೆ. ಅನುಮತಿ ಕೊಡಲಾಗಿದೆ**)**

**ಪಾಟೀ ಸವಾಲುಃ ಮಾನ್ಯ ವಿಶೇಷ ಪಿಪಿ ರವರಿಂದ ಃ-**

ದಿಃ 06-10-2017 ರಂದು ಹನುಮನಹಳ್ಳಿ ಪಂಚಾಯಿತಿ ಬೆಟ್ಟಗೇರನಹಳ್ಳಿ ಗ್ರಾಮದ ಕೆರೆ ಅಂಗಳದಲ್ಲಿ ನೊಂದ ಬಾಲಕಿ ತನಗೆ ವಿಷ ಪ್ರಾಶನ ಮಾಡಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೊಲೀಸರು ಮದ್ಯಾಹ್ನ 12.00 ರಿಂದ 12.45 ರವರೆಗೆ ಮಹಜರ್ ಬರೆದು ಓದಿ ಹೇಳಿದ ನಂತರ

ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಎಲ್ಲಾ ವಿಚಾರ ಗೊತ್ತಿದ್ದೂ ಈಗ ಆರೋಪಿಗಳಿಗೆ ಸಹಾಯ ಮಾಡಲು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಪಾಟೀ ಸವಾಲು ಇಲ್ಲ

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

<u>**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**</u>

<u>**ಎಸ್.ಸಿ. ನಂಃ 01/2018**</u>

ಪ್ರಾಸಾ ಃ 9 (ಚಾಸಾ ಃ 13 )

ಪ್ರಮಾಣೀಕರಿಸಿದ ದಿನಾಂಕಃ **21-06-2018**

ಹೆಸರು ಃ ಡಾ. ಬೈಯ್ಯಪ್ಪರೆಡ್ಡಿ

ತಂದೆಯ ಹೆಸರು ಃ ಎಸ್‌ಟಿ. ವೀರಣ್ಣ

ವಯಸ್ಸು ಃ 49 ವರ್ಷ

ಕೆಲಸ ಃ ಕ್ಷ ಕಿರಣ ತಜ್ಞರು (ಎಸ್‌ಎನ್‌ಆರ್ ಆಸ್ಪತ್ರೆ)

ವಾಸ ಃ ಕೋಲಾರ

<u>**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**</u>

ನಾನು ಜುಲೈ 2011 ರಿಂದ ಇಲ್ಲಿಯವರೆಗೆ ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ಕ್ಷ-ಕಿರಣ ತಜ್ಞರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿಃ 07-10-2017 ರಂದು ನೊಂದ ಬಾಲಕಿಯನ್ನು ಮುಳಬಾಗಿಲು ಗ್ರಾಮಾಂತರ ಠಾಣೆಯ ಮಹಿಳಾ ಪೇದೆ 412 ಎಂಬುವವರು ಅವಳ ವಯಸ್ಸಿನ ದೃಡೀಕರಣಕ್ಕಾಗಿ ನಮ್ಮ ಆಸ್ಪತ್ರೆಗೆ ಕರೆತಂದಿದ್ದು ಅವಳನ್ನು ಕ್ಷ-ಕಿರಣಕ್ಕೆ ಒಳಪಡಿಸಿದಾಗ ಅವಳ ವಯಸ್ಸು ಸುಮಾರು 16 ರಿಂದ 18 ಎಂದು ಕಂಡು ಬಂದಿದ್ದು, ಈ ಬಗ್ಗೆ ಪ್ರಮಾಣ ಪತ್ರ ಕೊಟ್ಟಿದ್ದು, ಅದನ್ನು ನಿಪಿ 6, ಸಾಕ್ಷಿಯ ಸಹಿಯನ್ನು ನಿಪಿ 6 (ಎ) ಎಂದು ಗುರ್ತಿಸಲಾಯಿತು.

<u>**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**</u>

ನಾವು ನಮೂದಿಸಿರುವ ವಯಸ್ಸಿನ ಬಗ್ಗೆ 2 ವರ್ಷಗಳ ಅಂತರ ಇರುತ್ತದೆ ಎಂದರೆ ಸರಿ.

<u>**ಮರುವಿಚಾರಣೆಃ ಇಲ್ಲ**</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.